# ಫಾಸ್ಟ್ ಫಾರ್ವರ್ಡ್, ಫ್ಲಾಷ್‌ಬ್ಯಾಕ್, ಸ್ಟ್ರೈಟ್ ಡ್ರೈವ್

ಅದೇ ತಾನೆ ಹೊಸಮನೆಯಲ್ಲಿ ಹಾಲುಕ್ಕಿಸಿ ಬಂದಿದ್ದ ನಟೀಮಣಿ ಹೊಸ ನಟನ ಜೊತೆ ನಟಿಸಲು ಒಪ್ಪಿ ಸಹಿ ಹಾಕಿದ್ದ ಸಿನಿಮಾ ಮುಹೂರ್ತಕ್ಕೆ ಬಂದರು. ಅಪರೂಪಕ್ಕೆಂಬಂತೆ ಸೀರೆ ಉಟ್ಟಿದ್ದರು. ಹಣೆ ಮೇಲೆ ಕುಂಕುಮ. ಕೈಲಿದ್ದ ಹಣವನ್ನೆಲ್ಲಾ ಸುರಿದು ನಗರದ ಪಾಶ್ ಬಡಾವಣೆಯ ನಡುವೆ ಒಂದು ಮನೆ ಕೊಂಡುಕೊಂಡ ಸಾರ್ಥಕ್ಯ ಅವರದ್ದು. ಇನ್ನು ಬ್ಯಾಂಕ್ ಬ್ಯಾಲೆನ್ಸ್ ಹೆಚ್ಚೂಕಡಿಮೆ ಝೀರೋ ಎಂದು ಅವರು ದೊಡ್ಡ ಉಸಿರನ್ನು ಹೊರ ಹಾಕಿದ್ದರು.

ಫಾಸ್ಟ್ ಫಾರ್ವರ್ಡ್ ಎರಡು ವರ್ಷ ಉರುಳಿದ್ದೇ ಗೊತ್ತಾಗಲಿಲ್ಲ. ನಟಿ ನೀಳಕಾಯದ ನಿರ್ದೇಶಕ ಕಂ ನಟನ ಸಿನಿಮಾ ಮುಗಿಯುವ ಹೊತ್ತಿಗೆ ಕ್ಯಾತೆ ತೆಗೆದಿದ್ದರು. ವಿಷಯ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯವರೆಗೆ ಹೋಯಿತು. ಕಿರಿಕ್‌ಗೆ ಮಂಡಳಿಯ ಧುರೀಣರು ತೇಪೆಹಚ್ಚುವ ವಿಫಲ ಯತ್ನ ನಡೆಸಿದರು. ನೋಡನೋಡುತ್ತಲೇ ನಟಿ ಇನ್ನಷ್ಟು ಬೆಳೆದರು. ಸುದ್ದಿಗೋಷ್ಠಿಗೆ ತಡವಾಗಿ ಬರುವುದು ಅವರಿಗೆ ಸಹಜ. ಅದನ್ನು ಪ್ರಶ್ನಿಸಿದ ಸುದ್ದಿಮಿತ್ರರನ್ನೇ ಒಮ್ಮೆ ತರಾಟೆಗೆ ತೆಗೆದುಕೊಂಡರು. ಅದಾಗಿ ಇನ್ನಷ್ಟು ತಿಂಗಳುಗಳು ಉರುಳಿದ್ದೇ ಛಾಯಾಗ್ರಾಹಕರೊಬ್ಬರು ಫೋಟೊ ತೆಗೆದು ಪತ್ರಿಕೆಗಳಿಗೆ ಕಳುಹಿಸಿದರು. ಆ ಪಾತ್ರಕ್ಕೆಂದೇ ತುಸು ದಪ್ಪವಾಗಿದ್ದ ನಟಿಗೆ ಅನುಮತಿಯಿಲ್ಲದೆ ಆ ಫೋಟೊ ತೆಗೆದ ಛಾಯಾಗ್ರಾಹಕರ ಮೇಲೆ ಕೆಂಡಾಮಂಡಲ ಕೋಪ ಬಂತು. ಪೊಲೀಸ್ ಠಾಣೆಗೆ ದೂರು ಕೊಟ್ಟರು. ಛಾಯಾಗ್ರಾಹಕರ ಮುಖದಲ್ಲಿ ಬೆವರಿಳಿಯಿತು. ಅದನ್ನು ಅವರು ಒರೆಸಿಕೊಳ್ಳುವಷ್ಟರಲ್ಲಿ ನಟೀಮಣಿ ರಾಜಕಾರಣಿಯಾದರು. ಚುನಾವಣೆಯಲ್ಲಿ ನಿಂತು ಗೆದ್ದರು. ಕೊಟ್ಟ ಕಾಲ್‌ಷೀಟ್ ಮರೆತರು. ರಾಜಕೀಯದ ಮೊಗಸಾಲೆಯಲ್ಲಿ ತಿರುಗಾಡತೊಡಗಿದ್ದೇ ಅವರನ್ನೇ ನೆಚ್ಚಿಕೊಂಡು ಸಿನಿಮಾ ಮಾಡುತ್ತಿದ್ದವರಿಗೆ ಪೀಕಲಾಟಕ್ಕೆ ಬಂತು. ಏನೇನೋ ಮಾತಾದ ಮೇಲೆ ಈಗ ಆ ಸಿನಿಮಾ ಮುಗಿಸಿಕೊಡುವ ಭರವಸೆಯನ್ನು ನಟಿ ಕಂ ರಾಜಕಾರಣಿ ನೀಡಿ ಆಗಿದೆ.

ಫ್ಲಾಷ್‌ಬ್ಯಾಕ್ ತಾರಾ ಹೋಟೆಲ್‌ನ ಕೋಣೆಯೊಂದನ್ನೇ ದೀರ್ಘ ಕಾಲ ಮನೆಯಾಗಿಸಿಕೊಂಡಿದ್ದ ಆ ನಟಿ ಐಷಾರಾಮವನ್ನೇ ಹಾಸು ಹೊದ್ದವರು. ಸ್ನಾನ ಮಾಡಲು ಖನಿಜಯುಕ್ತ ನೀರನ್ನು ಬಳಸುತ್ತಾರೆಂದು ಗುಲ್ಲು ಹಬ್ಬುವಷ್ಟರ ಮಟ್ಟಿಗಿತ್ತು ಅವರ ಐಷಾರಾಮ. ಕಡ್ಡಿ ತುಂಡುಮಾಡುವಂಥ ಮಾತು. ತಮಿಳು ಚಿತ್ರವೊಂದರಲ್ಲಿ ಅವರು ಕಡಲತಟದ ಮರಳಿನ ಮೇಲೆ ಉರುಳಾಡುವ ದೃಶ್ಯವೊಂದನ್ನು ಹಾಡೊಂದರಲ್ಲಿ ನಟಿಸಿದ್ದರು. ಅದನ್ನು ಕಂಡ ಕನ್ನಡದ ಅಭಿಮಾನಿಗಳು, ಅಲ್ಲೊಂದು ಥರ ಇಲ್ಲೊಂದು ಥರ ಎಂದು ಕುಹಕವಾಡಿದ್ದೂ ಇದೆ.

ಇತ್ತೀಚೆಗೆ ಅವರ ಸಿನಿಮಾ ಆಸಕ್ತಿ ಕಡಿಮೆಯಾದಂತಿತ್ತು. ರಾಜಕೀಯ ಅವರಿಗೀಗ ಮೋಹನ ಮುರಲಿ. ಚುನಾವಣಾ ಪ್ರಚಾರಕ್ಕೆ ಓಡಾಡಿದ ಮೇಲೆ ಅವರ ಮೇಕಪ್ ಒಳಗಿದ್ದ ತ್ವಚೆ ಒಂಚೂರು ಮಂಕಾಗಿದ್ದೂ ನಿಜ.

ಸ್ಟ್ರೈಟ್ ಶಾಟ್ ನಟಿ ಮಾತಿನಲ್ಲಿ ಸ್ಟ್ರೈಟ್ ಡ್ರೈವ್ ಮಾಡುವುದೇ ಹೆಚ್ಚು. ಇಂಗ್ಲಿಷ್ ಮೋಹಕ್ಕೆ ಬಿದ್ದಿದ್ದವರು ಅವರು. ಕನ್ನಡವನ್ನೂ ಇಂಗ್ಲಿಷ್ ಶೈಲಿಯಲ್ಲೇ ಮಾತನಾಡುತ್ತಿದ್ದದ್ದು. ಈಗೀಗ ನಾಲಗೆಯನ್ನು ಒಂಚೂರು ಪಾಲಿಷ್ ಮಾಡಿಕೊಂಡಿದ್ದಾರೆ. ಈಗ ರಾಜಕೀಯದಲ್ಲಿ ಅವರ ಸ್ಟ್ರೈಟ್ ಡ್ರೈವ್ ಹೇಗಿರುತ್ತದೋ? ಅಭಿನಯವಂತೂ ಶುರುವಾಗಿದೆ.

● ಎನ್ವಿ

Printed and Published by S.V. Srinivasan on behalf of **The Printers (Mysore) Private Ltd.** Printed at M/s. Rajhans Enterprises, no. 134, 4th main road, Industrial Town, Rajajinagar, Bangalore - 560044. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: **K.N. SHANTH KUMAR.**

Editorial Office: 75, M.G Road, Bangalore-560 001 E-mail:editormy@mayura.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited.RNI No 17129/68